ಸೇರಿಸಿದ್ದರು. ಈ ಸಾರಿ ಏನು ಮಾಡಿದರು ಎಂದರೆ, ಆ ಒಂದೊಂದು ಸಾವಿರ ಕೊಟ್ಟಿದ್ದರಲ್ಲಿ ಎಲ್ಲದಕ್ಕೂ ಕೊಡುವುದಕ್ಕಾಗದೆ ಕೆಲವಕ್ಕೆ ಮಾತ್ರ ಎಷ್ಟು ನಮ್ಮ ಹಣದ ಒಂದು ವ್ಯವಸ್ಥೆ ಇದೆಯೋ ಅದನ್ನು ನಮ್ಮ ಎಲ್ಲಾ ಶಾಸಕರಿಗೆ ಹಂಚುವುದಕ್ಕೆ ಸಾಕಷ್ಟು ಪ್ರಯತ್ನವನ್ನು ಮಾಡಿದ್ದೇನೆ; ಇದರಲ್ಲಿ ಸ್ವಲ್ಪ ವ್ಯತ್ಯಾಸವೂ ಆಗಿದೆ; ಆದರೆ ಮಹತ್ತರವಾದ ವ್ಯತ್ಯಾಸವೇನೂ ಆಗಿಲ್ಲ. ಈಗ ನನಗಿರತಕ್ಕಂಥದ್ದು ಎಪ್ಪತ್ತೈದು ಕೋಟಿ ರೂಪಾಯಿಗಳ ವಾರ್ಷಿಕ ಆಯವ್ಯಯ. ಹಳೆ ಕಾಮಗಾರಿಗಳಿಗೆ 50-60 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇನ್ನು ಕೆಲವು ಸಂಬಳಸಾರಿಗೆಗಳಿಗೆ ಹೋಗಿ ಐದಾರು ಕೋಟಿ ರೂಪಾಯಿಗಳಲ್ಲಿ ಇಡೀ ಸದಸ್ಯರನ್ನು ಸುಧಾರಿಸಬೇಕಾಗುತ್ತದೆ. ಆದುದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಹಾಗೂ ಹಣಕಾಸು ಸಚಿವರನ್ನು ಕೇಳಿದ್ದೇನೆ, ಅವರು ಇನ್ನಷ್ಟು ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ; ನಾನು ಅದೇ ಪ್ರಯತ್ನದಲ್ಲೂ ಕೂಡ ಇದ್ದೇನೆ. ಹೆಚ್ಚಿನ ಹಣ ಬಂದರೆ ಹೆಚ್ಚಿನ ಕಾಮಗಾರಿಗಳನ್ನು ಈ ಮುಖೇನ ನಾನು ತೆಗೆದುಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು: ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಅವರಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಹೆಚ್ಚು ಹಣವನ್ನು ಒದಗಿಸುವ ಸಂದರ್ಭದಲ್ಲಿ ಪಾಲ್ದಾಳು ಕೆರೆ ಎರಡೂವರೆ ವರ್ಷದಿಂದ ತಮ್ಮ ಅಧೀನದಲ್ಲೇ ಇತ್ಯರ್ಥವಾಗದೆ ಇದೆ, ಅದನ್ನು ಇತ್ಯರ್ಥ ಪಡಿಸಬೇಕು. ಏಕೆಂದರೆ ಆ ಕೆರೆ ನೂರಕ್ಕೂ ಹೆಚ್ಚಿನ ಎಕರೆ ಜಮೀನಿಗೆ ನೀರನ್ನುಣಿಸುವಂಥ ಒಂದು ಕೆರೆ, ಆ ವೇಸ್ಟ್ ವಿಯರ್ ಸಂಪೂರ್ಣ ಒಡ್ಡು ಒಡೆದು ಹೋಗಿದೆ, ಅದನ್ನು ನೀವು ಸರಿಪಡಿಸಬೇಕು ಮತ್ತೆ ದೇವನೂರಿಗೂ ಕೂಡ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ: ಮುಂದೆ ದೊರೆಯುವ ಹಣಕಾಸಿನಲ್ಲಿ ಸನ್ಮಾನ್ಯ ಸದಸ್ಯರು ಕೇಳಿದ ಕಾಮಗಾರಿಗಳನ್ನು ನಾನು ಮಾಡಿಸಿಕೊಡುತ್ತೇನೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಚೇರ್‌ಮನ್‌ರವರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 36ನೇ ಪಟ್ಟಿಯಲ್ಲಿರುವ 79 ಪ್ರಶ್ನೆಗಳ ಪೈಕಿ 49 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ: ವಿದ್ಯುತ್ ಉತ್ಪಾದನೆಗೆ ನ್ಯಾಫ್ತಾ ಸರಬರಾಜು

2787 (3767)

ಶ್ರೀ ಅಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಇಂಧನ ರಾಜ್ಯ ಸಚಿವರು ಈ

ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿಡದಿ ಬಳಿ ಸ್ಥಾಪಿಸಲಿರುವ ವಿದ್ಯುತ್ ಘಟಕಕ್ಕೆ ಬೇಕಾಗುವ ನ್ಯಾಫ್ತಾದ ಪ್ರಮಾಣವೆಷ್ಟು?

ಆ) ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರದೊಡನೆ ವ್ಯವಹರಿಸಿದೆಯೇ?

ಇ) ಕೇಂದ್ರ ಸರ್ಕಾರ ಈ ಘಟಕಕ್ಕೆ ಬೇಕಾಗುವ ನ್ಯಾಪ್ತಾವನ್ನು ಪೂರೈಸಲು ಒಪ್ಪಿಗೆ ಸೂಚಿಸಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪರೂರ್ (ಇಂಧನ ರಾಜ್ಯ ಸಚಿವರು):

ಅ) ಬಿಡದಿಬಳಿ ಸ್ಥಾಪಿಸಲಿರುವ ವಿದ್ಯುತ್ ಘಟಕಕ್ಕೆ ಕೇವಲ 100 ಮೆ.ವ್ಯಾ ಸಾಮರ್ಥ್ಯಕ್ಕೆ ವರ್ಷಕ್ಕೆ 1,25,000 ಟನ್ ನ್ಯಾಪ್ತಾದ ಪೂರೈಕೆ ಭಾರತ ಸರ್ಕಾರದಿಂದ ಲಭ್ಯವಾಗಿದೆ.

ಆ) ಹೌದು.

ಇ) ಹೌದು.

ವಿಷಯ: ಸಾರಾಯಿ ಗುತ್ತಿಗೆ ಪಡೆದ ವ್ಯಕ್ತಿಗಳಿಂದ ಬ್ಯಾಂಕ್ ಗ್ಯಾರಂಟಿ ಮತ್ತು ಸೆಕ್ಯೂರಿಟಿ ತೆಗೆದುಕೊಳ್ಳದೇ ಇರುವುದು.

2788 (3436)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಾಯಿ ಗುತ್ತಿಗೆ ಪಡೆದ ವ್ಯಕ್ತಿಗಳಿಗೆ 1994-95, 1995-96ನೇ ಸಾಲಿನಲ್ಲಿ ಬ್ಯಾಂಕ್‌ಗಳ ಗ್ಯಾರಂಟಿ ಮತ್ತು ಇತರೆ ಸೆಕ್ಯೂರಿಟಿಗಳನ್ನು ತೆಗೆದುಕೊಳ್ಳದೆ ಗುತ್ತಿಗೆಯನ್ನು ಎಷ್ಟು ಜನರಿಗೆ ನೀಡಲಾಗಿದೆ?

ಆ) ಇದರಲ್ಲಿ ಸಮಯಕ್ಕೆ ಸರಿಯಾಗಿ ಹಣಕಟ್ಟದೆ ಡಿಫಾಲ್ಟರ್ ಆದವರು ಎಷ್ಟು ಜನರಿರುತ್ತಾರೆ?

ಇ) ಡಿಫಾಲ್ಟರ್‌ಗಳಾದವರಲ್ಲಿ ಎಷ್ಟು ಮೊತ್ತದ ಹಣ ಬಾಕಿ ಇರುತ್ತದೆ? (ಪ್ರತ್ಯೇಕವಾಗಿ ವಿವರ ನೀಡುವುದು)

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿಗಳು):